## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ

**ಸಿ. ಸಿ. ಸಂಖ್ಯೆ ಃ 577/2019**

ಸಿಡಬ್ಲ್ಯು- 1
ಕೋರ್ಟ್ ವಿಟ್ನೆಸ್ (ಸಾಕ್ಷಿ)

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಜೀಜೋ |
| ತಂದೆಯ ಹೆಸರು | ಃ | ಜಾನ್ಸನ್ |
| ವಯಸ್ಸು | ಃ | 36 ವರ್ಷ |
| ವೃತ್ತಿ | ಃ | ವ್ಯವಸ್ಥಾಪಕರು, ಯೂನಿಯನ್ ಬ್ಯಾಂಕ್, ವಿರಾಜಪೇಟೆ ಶಾಖೆ |
| ವಾಸಸ್ಥಳ | ಃ | ವಿರಾಜಪೇಟೆ ನಗರ |

**ದಿನಾಂಕ ಃ 19-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ನ್ಯಾಯಾಲಯದಿಂದ ಃ**

ನಾನು ದಿನಾಂಕ 24-06-2022 ರಿಂದ ಇಲ್ಲಿಯವರೆಗೆ ವಿರಾಜಪೇಟೆ ನಗರ ಶಾಖೆಯ ಯೂನಿಯನ್ ಬ್ಯಾಂಕ್ ನಲ್ಲಿ ವ್ಯವಸ್ಥಾಪಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗೆ ಈ ನ್ಯಾಯಾಲಯದಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಹಾಜರುಪಡಿಸಿ ಸಾಕ್ಷ್ಯ ನೀಡುವಂತೆ ಸಮನ್ಸ್ ಬಂದಿರುತ್ತದೆ. ಈ ಪ್ರಕರಣದಲ್ಲಿ ಕೇಳಿರುವಂತೆ ನಮ್ಮ ಬ್ಯಾಂಕ್ ಗೆ ಸೇರಿದ ಅಂದರೆ ಹಿಂದಿನ ಕಾರ್ಪೋರೇಷನ್ ಬ್ಯಾಂಕ್ (ಈಗಿನ ಯೂನಿಯನ್ ಬ್ಯಾಂಕ್ ನ) ಚೆಕ್ ಸಂ. 311546 ರ ಖಾತೆಗೆ ಸಂಬಂಧಿಸಿದಂತೆ ವಿವರವನ್ನು ನೀಡುವಂತೆ ತಿಳಿಸಲಾಗಿರುತ್ತದೆ. ಸದರಿ ಚೆಕ್ ಸಂ. 311546 ನಮ್ಮ ಹಿಂದಿನ ಕಾರ್ಪೋರೇಷನ್ ಬ್ಯಾಂಕ್ ನ ಎಸ್ ಬಿ ಖಾತೆ ಸಂ. 21105 ಗೆ ಸಂಬಂಧಿಸಿದ ಚೆಕ್ ಆಗಿದ್ದು, ಅದು ಆರೋಪಿಯಾದ ನಾಯಕಂಡ ಬೋಪಣ್ಣ ನವರಿಗೆ ಸೇರಿದ ಚೆಕ್ ಆಗಿರುವುದಿಲ್ಲ. ಸದರಿ ಎಸ್ ಬಿ ಖಾತೆ 21105 ಪೆರಂಬಾಡಿಯ ಆರ್ಜಿ ಗ್ರಾಮದ ಮೆಹರೂಫ್ ಎಂ ಎಸ್ ಹಾಗೂ ಅವರ ಹೆಂಡತಿಯಾದ ರೆಹನಾ ಸಿ ಪಿ ಯವರ ಜಂಟಿ ಖಾತೆಯಾಗಿದ್ದು, ಸದರಿ ಮೇಲೆ ಹೇಳಿದ ಚೆಕ್ ಸಂ. 311546 ಚೆಕ್ ಸದರಿ ಎಸ್ ಬಿ ಖಾತೆ ಸಂ. 21105 ಗೆ ಸೇರಿದ ಚೆಕ್ ಆಗಿರುತ್ತದೆ. ಈ ಬಗ್ಗೆ ನಾನು ನಮ್ಮ ಬ್ಯಾಂಕ್ ನ ಪರವಾಗಿ ಪತ್ರ ಹಾಗೂ ಸದರಿ ಎಸ್ ಬಿ ಖಾತೆ ಸಂ. 21105 ಗೆ ಸೇರಿದ ಅಕೌಂಟ್ ಸ್ಟೇಟ್ ಮೆಂಟ್ ಹಾಗೂ ಚೆಕ್ ಲೀಫ್ ನ ವಿವರವನ್ನು

ಹಾಜರುಪಡಿಸಿರುತ್ತೇನೆ. ಅವುಗಳನ್ನು ನಮ್ಮ ಕೋರ್ ಬ್ಯಾಂಕಿಂಗ್ ಸಲ್ಯೂಶನ್ ನಿಂದ ತೆಗೆದು ಹಾಜರುಪಡಿಸಿರುತ್ತೇನೆ. ಸಾಕ್ಷಿಯು ಹಾಜರುಪಡಿಸಿದ ಪತ್ರವನ್ನು ನಿಸಿ1 ಎಂದು, ಅಕೌಂಟ್ ಸ್ಟೇಟ್ ಮೆಂಟ್ ನ್ನು ನಿಸಿ2 ಎಂದು ಹಾಗೂ ಚೆಕ್ ಲೀಫ್ ನ ವಿವರವನ್ನು ನಿಸಿ3 ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲು ಃ ಶ್ರೀ. ವಿ ಜಿ ಆರ್ / ಶ್ರೀಮತಿ ವಿ ಸಿ ಪಿ ಪಿರ್ಯಾದಿ ಪರ ವಕೀಲರಿಂದ</u>**

ಸದರಿ ನಿಪಿ1 ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸಿದಾಗ ನಿಪಿ2 ರಂತೆ ಸಾಕಷ್ಟು ಹಣ ಇರುವುದಿಲ್ಲ ಎಂಬ ಹಿಂಬರಹದೊಂದಿಗೆ ಚೆಕ್ ನ್ನು ಹಿಂತಿರುಗಿಸಿರುತ್ತೇವೆ ಎಂದರೆ ಸರಿ. ಆ ಸಮಯದಲ್ಲಿ ಸದರಿ ಚೆಕ್ ಆರೋಪಿಗ ಸೇರಿದ ಚೆಕ್ ಎಂದು ತಿಳಿಸಲು ತೊಂದರೆಯಿತ್ತೇ ಎಂದರೆ ಸಾಕ್ಷಿಯು ನಾವು ಚೆಕ್ ನ್ನು ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಮೊದಲು ಸದರಿ ಖಾತೆಯಲ್ಲಿ ಸಾಕಷ್ಟು ಇರುತ್ತದೆಯೇ ಎಂದು ಪರಿಶೀಲಿಸುತ್ತೇವೆ ಹಾಗೂ ಸಾಕಷ್ಟು ಹಣವಿಲ್ಲದೆ ಇದ್ದಲ್ಲಿ ಸದರಿ ಹಿಂಬರಹದೊಂದಿಗೆ ಹಿಂತಿರುಗಿಸುತ್ತೇವೆ, ಒಂದು ಪಕ್ಷದಲ್ಲಿ ಸಾಕಷ್ಟು ಹಣವಿದ್ದಲ್ಲಿ ಮುಂದಿನ ಪ್ರಕ್ರಿಯೆ ಅಂದರೆ ಅಕೌಂಟ್ ನ ವಿವರವನ್ನು ಪರಿಶೀಲಿಸುತ್ತೇವೆಂದು ನುಡಿಯುತ್ತಾರೆ.

**<u>ಪಾಟಿ ಸವಾಲು ಃ ಶ್ರೀ ಡಿ ಸಿ ಡಿ ಆರೋಪಿ ಪರ ವಕೀಲರಿಂದ</u>**

ಪಾಟಿ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.